सत्यमेव जयते
ರಾಜೀವ್ ಚಂದ್ರಶೇಖರ್
ಸಂಸತ್ ಸದಸ್ಯರು

12ನೇ ಜನವರಿ, 2012

**ಮಾನ್ಯಶ್ರೀ ಸದಾನಂದಗೌಡ ರವರೇ,**

ಕರ್ನಾಟಕದಲ್ಲಿನ ರಾಷ್ಟ್ರೀಯ ಸ್ಮಾರಕಗಳ ಮೇಲೆ ನಡೆಯುತ್ತಿರುವ ಒತ್ತುವರಿ ಹಾಗೂ ಅನಧಿಕೃತ ನಿರ್ಮಾಣಗಳ ಶೋಚನೀಯ ಸ್ಥಿತಿಯ ಬಗ್ಗೆ ತಮ್ಮ ಗಮನ ಸೆಳೆಯಲು ಬಯಸುತ್ತೇನೆ.

ಸೆಪ್ಟೆಂಬರ್ 07, 2011 ರಂದು ಸಂಸದ್ ಸಭೆಯಲ್ಲಿ ನಾನು ಎತ್ತಿದ ಪ್ರಶ್ನೆಗಳಿಗೆ ಪ್ರತಿಕ್ರಿಯೆಯಾಗಿ ಇವು ಬೆಳಕಿಗೆ ಬಂದಿವೆ.(ಪ್ರತಿ ಲಗತ್ತಿಸಲಾಗಿದೆ). ತಮ್ಮ ಪ್ರತಿಕ್ರಿಯೆಯಲ್ಲಿ, ಭಾರತ ಸರ್ಕಾರದ ಸನ್ಮಾನ್ಯ ಸಂಸ್ಕೃತಿ ಸಚಿವರಾದ ಕುಮಾರಿ ಸೆಲ್ಜಾ ಕುಮಾರ್ ರವರು, ಕರ್ನಾಟಕದ 22 ಜಿಲ್ಲೆಗಳಲ್ಲಿ 507 ರಾಷ್ಟ್ರೀಯ ಸ್ಮಾರಕಗಳು ಕೇಂದ್ರದಿಂದ ಸಂರಕ್ಷಿಸಲ್ಪಡುತ್ತಿದ್ದು, ಅವುಗಳ ಪೈಕಿ 59 ಸ್ಥಳಗಳನ್ನು ಒತ್ತುವರಿ ಮಾಡಲಾಗಿದೆ ಅಥವಾ ಅನಧಿಕೃತ/ಕಾನೂನುಬಾಹಿರ ನಿರ್ಮಾಣಗಳನ್ನು ಕೈಗೊಳ್ಳಲಾಗಿದೆ ಎಂದು ಹೇಳಿದ್ದಾರೆ. ಅಂದರೆ, ರಾಜ್ಯದಲ್ಲಿನ ಪ್ರತಿ ಒಂಭತ್ತನೆ ರಾಷ್ಟ್ರೀಯ ಸ್ಮಾರಕ ಒತ್ತುವರಿ ಮಾಡಲ್ಪಟ್ಟಿದೆ ಅಥವಾ ದುರ್ಬಳಕೆಯಾಗುತ್ತಿದೆ.

ತಮಗೆ ತಿಳಿದಿರುವಂತೆ, ವಿಜಯನಗರ, ಚಾಳುಕ್ಯ, ಕದಂಬ, ಬಹಮನಿ ಇತ್ಯಾದಿ ಕಾಲಕ್ಕೆ ಸೇರಿದ ವಾಸ್ತುಶಿಲ್ಪ ಸಂಪತ್ತುಗಳು ಹಾಗೂ ಅದ್ಭುತ ಸ್ಮಾರಕಗಳು ಸೇರಿದಂತೆ, ಕರ್ನಾಟಕ ಅತ್ಯಂತ ಪ್ರಾಚೀನ ಸ್ಮಾರಕಗಳಿಗೆ ಹಾಗೂ ಪಾರಂಪರಿಕ ನಿವೇಶನಗಳಿಗೆ ತವರಾಗಿದೆ. ಹೀಗೆ ಮುಂದುವರಿದರೆ, ಸ್ಮಾರಕಗಳ ಮೇಲೆ ಒತ್ತುವರಿ ಇನ್ನಷ್ಟು ಹೆಚ್ಚುತ್ತದೆ ಮತ್ತು ನಮ್ಮ ಅಮೂಲ್ಯವಾದ ಪ್ರಾಚೀನ ಸ್ಮಾರಕಗಳಿಗೆ ಹಾಗೂ ಪಾರಂಪರಿಕ ನಿವೇಶನಗಳಿಗೆ ಸರಿಪಡಿಸಲಾಗದ ಹಾನಿಯಾಗುವುದರ ಜೊತೆಗೆ, ಈ ಸ್ಥಳಗಳಿಗೆ ಭೇಟಿ ನೀಡುವ ಲಕ್ಷಾಂತರ ಪ್ರವಾಸಿಗರನ್ನು ಅವಲಂಬಿಸಿರುವ ರಾಜ್ಯದ ಪ್ರವಾಸೋದ್ಯಮದ ಹಾಗೂ ಸ್ಥಳೀಯ ಆರ್ಥಿಕತೆ ಮೇಲೆ ನಕಾರಾತ್ಮಕ ಪ್ರಭಾವ ಉಂಟಾಗುತ್ತದೆ.

ಒಂದು ಸಮಾಜವಾಗಿ ಈ ಅಮೂಲ್ಯ ಪ್ರಾಚೀನ ಸ್ಮಾರಕಗಳಿಗೆ ಹಾಗೂ ಪಾರಂಪರಿಕ ನಿವೇಶನಗಳನ್ನು ಮುಂಬರುವ ಪೀಳಿಗೆಗಳಿಗೆ ಸಂರಕ್ಷಿಸಿಡುವುದು ನಮ್ಮ ಕರ್ತವ್ಯವಾಗುತ್ತದೆ. ಈ

. . . 2 . .

11ನೇ ಮಹಡಿ, ದೊಡ್ಡ ಗೋಪುರ, ಸರ್.ಎಂ.ವಿಶ್ವೇಶ್ವರಯ್ಯ ಕೇಂದ್ರ, ಡಾ.ಅಂಬೇಡ್ಕರ್ ವೀಧಿ, ಬೆಂಗಳೂರು - 560 001.
ದೂರವಾಣಿ : 91-80-22863600, ದೂರವಾಣಿ / ಫ್ಯಾಕ್ಸ್: 91-80-22863680
ಅಂತರ್ಜಾಲ ವಿಳಾಸ : rajeev.c@nic.in
www.rajeev.in / ham: VU2RCL

ಗಂಭೀರ ಸಮಸ್ಯೆಯ ಬಗ್ಗೆ ಗಮನ ಹರಿಸಿ ಒತ್ತುವರಿ/ಕಾನೂನುಬಾಹಿರ ನಿರ್ಮಾಣವಾಗುತ್ತಿರುವ ಸ್ಮಾರಕಗಳಿಗೆ ಸಂಬಂಧಿಸಿದಂತೆ ಅಗತ್ಯ ಕಾನೂನು ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ತಕ್ಷಣ ತಾವು ಸೂಚನೆ/ಆದೇಶ ಹೊರಡಿಸಬೇಕೆಂದು ಒತ್ತಾಯಿಸುತ್ತೇನೆ ಮತ್ತು ಕರ್ನಾಟಕದ ಇತಿಹಾಸ ಮತ್ತು ಪರಂಪರೆಯ ಬಗ್ಗೆ ನಡೆಯುತ್ತಿರುವ ದುರ್ಬಳಕೆಯನ್ನು ತಕ್ಷಣ ನಿಲ್ಲಿಸಲು ಆಗ್ರಹಿಸುತ್ತೇನೆ.

ಮುಂದಿನ ಹಲವು ತಿಂಗಳುಗಳಲ್ಲಿ ಆ ಸ್ಥಳಗಳಿಗೆ ನಾನು ವೈಯಕ್ತಿಕವಾಗಿ ಭೇಟಿ ನೀಡಬೇಕೆಂದಿರುವ ಕಾರಣ, ಈ ವಿಷಯದ ಬಗ್ಗೆ ತಾವು ತೆಗೆದುಕೊಂಡಿರುವ ಕ್ರಮದ ಬಗ್ಗೆ ನನಗೆ ಮಾಹಿತಿ ಕಲ್ಪಿಸಬೇಕೆಂದು ನಿಮ್ಮ ಕಚೇರಿಯನ್ನು ಕೋರುತ್ತೇನೆ.

ತಮ್ಮ ವಿಶ್ವಾಸಿ

ರಾಜೀವ್ ಚಂದ್ರಶೇಖರ್

**ಶ್ರೀ ಡಿ ವಿ ಸದಾನಂದಗೌಡ**
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ವಿಧಾನ ಸೌಧ
ಬೆಂಗಳೂರು

ಲಗತ್ತುಗಳು:

1. ಭಾರತ ಸರ್ಕಾರದ ಸನ್ಮಾನ್ಯ ಸಂಸ್ಕೃತಿ ಸಚಿವರ ಪ್ರತಿಕ್ರಿಯೆ